**ದಿನಾಂಕಃ 14.07.2025 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಜಿ.ಸಿ.ಎಂ. ವಕೀಲರಿಂದಃ-**

1. ನಾನು ಸಲ್ಲಿಸಿದ ದಾಖಲೆಗಳಲ್ಲಿ ಇರುವ ಮಾಹಿತಿಯನ್ನು ನಾನು ತಿಳಿದುಕೊಂಡಿದ್ದೇನೆ. ನನ್ನ ದಾಖಲೆಗಳನ್ನು ನಾನೇ ವಕೀಲರಿಗೆ ನೀಡಿರುತ್ತೇನೆ. ನನ್ನ ತಾಯಿ ಗ್ರಾಮ ಪಂಚಾಯಿತಿಗೆ ಬರೆದುಕೊಟ್ಟ ಅಡಮಾನ ಪತ್ರದ ಬಗ್ಗೆ ನನಗೆ ಗೊತ್ತು. ಅದರಲ್ಲಿರುವ ನನ್ನ ತಾಯಿಯ ಸಹಿಯನ್ನು ನೋಡಿದರೆ ನಾನು ಗುರುತಿಸುತ್ತೇನೆ. ಅಡಮಾನ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಸಾಕ್ಷಿಗೆ ದಿನಾಂಕಃ10.01.2017 ರ ಅಡಮಾನ ಪತ್ರವನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು **ನಿಪಿ-13** ಎಂದು ಗುರುತಿಸಲಾಯಿತು.

2. ನಿಪಿ-13 ರಲ್ಲಿ ಸ್ವತ್ತಿನ ಚೆಕ್ಕುಬಂದಿಯನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಸ್ವತ್ತಿನ ಪೂರ್ವಕ್ಕೆ ದಾರಿ ಇದೆ, ನಂತರ ರಾ.ಹೆದ್ದಾರಿ ರಸ್ತೆ ಇದೆ. ಅದರಂತೆ ನಿಪಿ-13 ರಲ್ಲಿ ಬರೆಸಿದ್ದೇನೆ. ನಿಪಿ-13 ರಲ್ಲಿ ಪೂರ್ವಕ್ಕೆ ವಸಂತಕುಮಾರ್ ಅವರ ಜಾಗ ಎಂದು ಬರೆಯಲಾಗಿತ್ತು. ಸಾಕ್ಷಿ ಮುಂದುವರಿದು ಸದರಿ ಜಾಗವು ರಾ.ಹೆದ್ದಾರಿಗೆ ಸ್ವಾಧೀನವಾಗಿದೆ ಎಂದು ಸ್ವಇಚ್ಛೆಯಿಂದ ನುಡಿಯುತ್ತಾರೆ. ಈ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೇನೆ. ಸದರಿ ವಿಚಾರವನ್ನು ನನ್ನ ಪ್ರತಿವಾದ ಪತ್ರದಲ್ಲಾಗಲೀ ಅಥವಾ ಪ್ರಮಾಣ ಪತ್ರದಲ್ಲಾಗಲೀ ಬರೆಸಿಲ್ಲ ಎಂದರೆ ಸರಿಯಲ್ಲ. ವಾದಿ ವಸಂತಕುಮಾರ್ ರವರು ಸ್ವಾಧೀನಕ್ಕೆ ಸಂಬಂಧಿಸಿದಂತೆ 2019 ನೇ ಸಾಲಿನಲ್ಲಿ ಪರಿಹಾರ ಪಡೆದಿರುತ್ತಾರೆ.

3. ಹೆದ್ದಾರಿ ಪ್ರಾಧಿಕಾರದವರು ಸ್ವಾಧೀನಪಡಿಸಿಕೊಳ್ಳುವ ಮೊದಲು ನಮ್ಮ ಸ್ವತ್ತಿನ ಪೂರ್ವಕ್ಕೆ ವಸಂತಕುಮಾರ್ ಅವರ ಸ್ವತ್ತು ಇತ್ತು ಎಂದರೆ ಸರಿ. ನನ್ನ ಮನೆಯ ಸುತ್ತಮುತ್ತ ಪಂಚಾಯಿತಿಯವರು ನಡೆಸಿರುವ ಕಾಮಗಾರಿಗಳ ಬಗ್ಗೆ ನನಗೆ ಗೊತ್ತು. ಮುದ್ದುರಂಗಪ್ಪನವರ ಆಸ್ತಿ ಇದೆ. ಪಂಚಾಯಿತಿಯವರು ಮುದ್ದುರಂಗಪ್ಪನವರ ಆಸ್ತಿಯ ಮೇಲೆ ರಸ್ತೆ ಮಾಡಿರುವುದಿಲ್ಲ. ನನ್ನ ಸ್ವತ್ತಿನ ಪೂರ್ವ ಭಾಗಕ್ಕೆ ಇರುವ ಗಿಡಗಂಟೆಗಳನ್ನು ಸ್ವಚ್ಛಗೊಳಿಸಲು ನಾನು ಪಂಚಾಯಿತಿಗೆ ಯಾವುದೇ ಅರ್ಜಿ ನೀಡಿರುವುದಿಲ್ಲ.

4. ನಮ್ಮ ಮನೆಯ ಬಚ್ಚಲಮನೆಯ ನೀರು ಪೂರ್ವ ದಿಕ್ಕಿಗೆ ಹರಿಯುತ್ತದೆ. ನಮ್ಮ ಮನೆಯ ಪಶ್ಚಿಮ ದಿಕ್ಕಿನಲ್ಲಿ ಚರಂಡಿ ಇದೆ. ಸದರಿ ಚರಂಡಿಗೆ ನಮ್ಮ ಮನೆಯ ಬಚ್ಚಲ ನೀರು ಹೋಗುವುದಿಲ್ಲ. ನನಗೆ ಪೂರ್ವ ದಿಕ್ಕಿಗೆ ಚರಂಡಿ ಬೇಕು ಎಂದು ನಾನು ಪಂಚಾಯಿತಿಗೆ ಅರ್ಜಿ ನೀಡಿರುವುದಿಲ್ಲ. ಪಶ್ಚಿಮ ದಿಕ್ಕಿನಲ್ಲಿರುವ ಚರಂಡಿಯನ್ನು ಮಾಡಿ ಸುಮಾರು 8-9 ವರ್ಷ ಆಗಿದೆ. ನಮ್ಮ ಮನೆಯ ಪೂರ್ವ ದಿಕ್ಕಿನಿಂದ ರಾ.ಹೆದ್ದಾರಿ ಸಂಖ್ಯೆ:4 ಸುಮಾರು 15-20 ಅಡಿ ದೂರ ಇದೆ. ನಮ್ಮ ಮನೆಯಿಂದ ರಾ.ಹೆದ್ದಾರಿ ಸಂಖ್ಯೆ:4 ರ ನಡುವೆ ಇರುವ ರಸ್ತೆ 10 ಅಡಿ ಇದೆ. ನನ್ನ ಪ್ರತಿವಾದ ಪತ್ರದಲ್ಲಿ ನಮಗೆ ಪಂಚಾಯಿತಿಯವರು ನೀಡಿರುವ ಸ್ವತ್ತಿನ ವಿಸ್ತೀರ್ಣ ಮತ್ತು ಚೆಕ್ಕುಬಂದಿಯನ್ನು ಬರೆಸಿರುವುದಿಲ್ಲ. ನನ್ನ ಸ್ವತ್ತಿನ ವಿವರಗಳನ್ನು ಬರೆಸಲು ನನಗೆ ಯಾವುದೇ ತೊಂದರೆ ಇರಲಿಲ್ಲ.

5. ಪಂಚಾಯಿತಿಯವರು ನಮಗೆ ಯಾವುದೇ ಹಕ್ಕುಪತ್ರ ನೀಡಿಲ್ಲ ಎಂದರೆ ಸರಿಯಲ್ಲ. ಪಂಚಾಯಿತಿಯವರು ನೀಡಿದ ಹಕ್ಕುಪತ್ರದ ಪ್ರಕಾರ ಇ-ಖಾತೆಯನ್ನು ಮಾಡಿಸಿರುತ್ತೇವೆ. ನನ್ನ ಹಕ್ಕುಪತ್ರಕ್ಕೂ ಮತ್ತು ಈಗ ಹೇಳುವ ಸ್ವತ್ತಿನ ವಿಸ್ತೀರ್ಣಕ್ಕೂ ಒಂದಕ್ಕೊಂದು ತಾಳೆ ಇಲ್ಲ ಎಂದರೆ ಸರಿಯಲ್ಲ. ನಾನು ಕಟ್ಟಿರುವ ಮನೆಗೆ ಪಂಚಾಯಿತಿಯಿಂದ ಯಾವುದೇ ಪರವಾನಿಗೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯ ಜಾಗವನ್ನು ಕಬಳಿಸಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

6. ಪಂಚಾಯಿತಿಯವರು ಯಾವ ಸಂಖ್ಯೆಯ ನಿವೇಶನವನ್ನು ನೀಡಿದ್ದಾರೆ ಎಂದು ನನ್ನ ಹಕ್ಕುಪತ್ರದಲ್ಲಿ ನಮೂದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪಂಚಾಯಿತಿಯವರು ಬೇರೆಯವರಿಗೆ ಹಕ್ಕುಪತ್ರ ನೀಡಿರುವುದು ನನಗೆ ಗೊತ್ತಿಲ್ಲ. ವಾದಿಯ ಜಾಗದಲ್ಲಿ ಅವರು ಇಲ್ಲದ ಸಮಯದಲ್ಲಿ ಅತಿಕ್ರಮ ಪ್ರವೇಶ ಮಾಡಿ ದಾವಾ ಸ್ವತ್ತಿನಲ್ಲಿ ಅಕ್ರಮವಾಗಿ ಮನೆ ಕಟ್ಟಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗಾಗಲೀ, ಅಥವಾ ನನ್ನ ಕುಟುಂಬದವರಿಗಾಗಲೀ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ

ಎಂದರೆ ಸರಿಯಲ್ಲ. ವಾದಿಯ ಸ್ವತ್ತನ್ನು ಕಬಳಿಸಲು ಸುಳ್ಳು ತಕರಾರು ಸಲ್ಲಿಸಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,. ಹಿರಿಯೂರು.